ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 14ನೇ ಅಕ್ಟೋಬರ್ 1884.

ಮಾಹೆ ಗುಜಸ್ತಾ 1ನೇ ಮರ್ಕುಮಿನ ರಾತ್ರಿ ಜಂಕೀಪುರ–ಶಿವಮೊಗ್ಗಾ ರಸ್ತೆಯಲ್ಲಿ ಟಪ್ಪಾಲ್ ಚೋರಿ ನಡಸಿದ ಜನಗಳ ಪತ್ತೇ ಬಗ್ಯೆ ಅನುಕೂಲವಾದ ವರ್ತಮಾನವನ್ನು ಕೊಡುವವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುವದು.

ಇದರಡೀ ತಪಸೀಲ್ ಕಂಡ ಮಾಲ್‌ಗಳು ಚೋರಿ ಹೋಗಿರುವಂತೆ ರಿಪೋರ್ಟುಗಿರುತ್ತೆ:–

ಭಾಂಗೀ ನಂಬರ್ 1.

	ರೂ.	ಆ.	ಪೈ.
ಸುಮಾರು 25 ವರಹಾ ತೂಕದ ಅಡ್ಡಿಕೆ ಕೆಂಪು ಬಂಣದ ತಲೆ ಪಾಕಿಟ್	130	0	0
ಹೊಸಧಾರವಲ್ಲಿ ಪೋಣಿಸಿದ ಭಂಗಾರದ ಗುಂಡಿನ 46 ಗುಂಡು 1 ಹವಳ ಪೋಣಿಸಿರುತ್ತೆ, ಸುಮಾರು 18 ರೂಪಾಯಿ ತೂಕ	100	0	0
ಭಂಗಾರದ ಬಾವಲಿ ಸುತ್ತಲೂ ಹಳೇಮುತ್ತು ಹಾಕಿರುತ್ತೆ	20	0	0
ಬಳ್ಳೀ ಪಾಡಗ, ಮಕ್ಕಳ ಬಾಬತು	5	0	0

ಭಾಂಗೀ ನಂಬರ್ 2.

ಬಂದು ಜೊತೆ ಹೊಸಧೋತ್ರ	10	0	0

ಸೈಯದ್ ನಸಿರುದ್ದೀನ್,
ಫಾರ್ ಜೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 27ನೇ ಅಕ್ಟೋಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೊಪ್ಪ ತಾಲ್ಲೂಕು ಯಡೆಹಳ್ಳಿ ಟವನಿನಲ್ಲಿರುವ ನೇರ್ಲೆ ಪುಟ್ಟಯ್ಯನ ಜವಳಿ ಅಂಗಡಿಗೆ ಮಾಹೆ ಮಜಕೂರು ತಾರೀಖು 16ನೇ ರಾತ್ರಿ ಪ್ರವೇಶಿಸಿ ರೂಪಾಯಿ 782—10—0 ಕಿಮ್ಮತಿನ ಫಖ್ತ್ ಜವಳಿಯನ್ನು ಕಳವುಮಾಡಿಕೊಂಡು ಹೋದ ಕಳ್ಳನ ಅಥವಾ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ ಯಿರಡನೂರು ರೂಪಾಯಿ ಇನಾಂ ಕೊಡಲ್ಪಟ್ಟ್ಯೇತು.

ತಾರೀಖು 3ನೇ ಅಕ್ಟೋಬರ್ 1884.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಈ ಕೆಳಗೆ ವಿವರಿಸಲ್ಪಟ್ಟ ಸರ್ಕಾರೀ ಬಂಜರ್ ಜಂಗಲ್ ತಾಕು, ಕಾಫೀ ಸಾಗುವಳಿಗಾಗಿ ಕಾಯಂ ದರಕ್ಕೆ ಕೊಟ್ಟೊರ್ಡಿ ಯಸ್ಟೇಟಿನ ಮೆ॥ ಯಫ್. ಎಸ್. ಹೇಯವರಿಂದ ದರಖಾಸ್ತು ಮಾಡಲ್ಪಟ್ಟಿರುವದರಿಂದ, 1884ನೇ ಇಸವಿ ಡಿಸಂಬರ್ 1ನೇ ಮರ್ಕುಮಿನಲ್ಲಿ ಕೊಪ್ಪ ತಾಲ್ಲೂಕು ಅಮಲ್‌ದಾರ್ರ ರೂಬರೂ ಹರಿಹರ ಪುರದ ಮೊಕ್ಕಾಮಿನಲ್ಲಿ, ಸದರೀ ತಾಕಿಗೆ ಐಯಿಂದ ಗೊತ್ತು ಮಾಡಲ್ಪಡಬಹುದಾದ ಕಂದಾಯ ತೆರುವ ಬಗ್ಯೂ ಮತ್ತು ಆವಶ್ಯಕವಾಗಿರಬಹುದಾದ ಯಾವದಾದರೂ ಮಾರ್ಗ ಮತ್ತು ಜಲಾಧಾರ ವಗ್ಯೆರೇ ಹಕ್ಕುಗಳಿಗೆ ವಳಪಟ್ಟು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪಡೆಯುವ ಚಡ ದರಖಾಸ್ತುದಾರನು ಕ್ರಯದ ಮೊಬಲಗ್ ಪೈಕೀ ಶೇಕಡಾ 25ರ ಪ್ರಕಾರ ಆಗುವ ಮೊಬಲಗನ್ನು ಹರಾಜ್ ಕೈದಾದ ಕೂಡ್ಲೆ ಡಿಪಾಜಿಟ್ ಯಿಡಲ್ಪಟ್ಟು ಬಾಕೀ ಮೊಬಲಗು ಆ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು; ಸಾಗೆ ಪಾವತೀ ಮಾಡದೆ ತಪ್ಪಿದಲ್ಲಿ ಡಿಪಾಜಿಟ್ ಯಿಡಲ್ಪಟ್ಟ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

3. ಚಡ ದರಖಾಸ್ತುದಾರನು ಕೂಡ್ಲೆ ಶೇಕಡಾ 25ರ ಪ್ರಕಾರ ಡಿಪಾಜಿಟ್ ಮೊಬಲಗನ್ನು ಯಿಡುವದಕ್ಕಾಗಲೀ ಬಾಕೀ ಮೊಬಲಗನ್ನು 15 ದಿನಗಳೊಳಗಾಗಿ ಕೊಡಲಿಕ್ಕಾಗಲೀ ತಪ್ಪಿದರೆ ಸದರೀ ಜಮೀನು ಚಡ ದರಖಾಸ್ತುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಟ್ಟು ಪುನಶ್ಚ ಹರಾಜು ಹಾಕಲ್ಪಡುವದು.

4. ಜಮೀನ್ ಕ್ರಯವು ಡೆಪ್ಯುಟಿ ಕಮ್ಮಿಷನರವರಿಂದ ಕಾಯಂ ಮಾಡಲ್ಪಡುವ ತನಕ ಆಖೈರಾದ್ದಾಗಿರತಕ್ಕದ್ದಲ್ಲ.

5. ಜಮೀನಿನ ತಪಸೀಲಿನಲ್ಲಾಗಲೀ ಅಥವಾ ಅಂದಾಜಾ ಬೀಜವರೀಯಲ್ಲಾಗಲೀ ಯಿರುವ ಗಲ್ಲತಗಳಿಗೆ ಗವರ್ಮೆಂಟಿನವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು. ಇತರ ಹೆಚ್ಚಿಗೆ ತಪಸೀಲುಗಳು ಹರಾಜು ಕಾಲದಲ್ಲಿ ಕೇಳಿ ತಿಳಿದುಕೊಳ್ಳಬಹುದು.

6. ದರಖಾಸ್ತು ಮಾಡಲ್ಪಟ್ಟ ಜಂಗಲ್ ತಾಕು ಈ ಕೆಳಗೆ ಕಂಡ ಚಕ್ಕುಬಂದಿಯಲ್ಲಿ ಅಡಗಿರುತ್ತೆ. ದರಖಾಸ್ತುದಾರನ ಖಾಯಿಷ್‌ನಂತೆ ಸರ್ವೇ ಇಲಾಖೆಯವರಿಂದ ಸದರೀ ಜಮೀನ್ ಸರ್ವೇ ಮಾಡಲ್ಪಟ್ಟು ಬಾಂದು ಗುರ್ತುಗಳು ಹಾಕಲ್ಪಟ್ಟಿರುತವೆ, ಆದರೆ ಸರ್ವೆ ಮ್ಯಾಪ್ ತಲ್ಪಿರುವದಿಲ್ಲವಾಗಿ ಕೊಡಲ್ಪಟ್ಟ ಚಕ್ಕುಬಂದಿ ವ ಬೀಜವರೀ ಅಂದಾಜಾ ಆಗಿರುತ್ತೆ.

ದರಖಾಸ್ತು ಮಾಡಿರುವ ಜಂಗಲ್ ತಪಸೀಲ್‌ಗಳು:—

ಡಿಸ್ಟ್ರಿಕ್ಟ್	..	ಕಡೂರು.	ಗ್ರಾಮ	..	ಬೈರದೇವರು.
ತಾಲ್ಲೂಕು	..	ಕೊಪ್ಪ.	ಸರ್ವೆ ನಂಬರ್		159 ಮತ್ತು 194ರ ಭಾಗಗಳು.
ಮಾಗಣಿ	..	ಮೇಗುಂದ.	ಬೀಜವರೀ		ಹುವಾರ್ ಯಂಭತ್ತು ಎಕರೆಗಳು.

ಚಕ್ಕುಬಂದಿ.

ಪೂರ್ವಕ್ಕೆ—ಬೆಟ್ಟದ ಕೊಳಲು ಗ್ರಾಮದ ಯಲ್ಲಿ.	ಪಶ್ಚಿಮಕ್ಕೆ—ಕಮ್ಮಾರಮಂಣು ತರೀ ಜಮ್ಮಿ.
ದಕ್ಷಿಣಕ್ಕೆ—ಕುಡಗೋಲೆಹಿಡಿ ಬಿಳಲು.	ಉತ್ತರಕ್ಕೆ—ಕೊಟ್ಟೂರಿಡಿ ಕಾಫೀ ಯಸ್ಟೇಟ್.

ಮಹಮ್ಮದಲ್ಲೀ, ಕೆ. ಬಿ.,
ಅಫಿಷೀಯೇಟಿಂಗ್ ಡೆಪ್ಯುಟಿ ಕಮಿಷನರ್.

ಅಮೃತಮಹಲ್ ಇಲಾಖೆ.

ತಿರಸ್ಕರಿಸಲ್ಪಟ್ಟ ಮತ್ತು ಜಾಸ್ತಿಯಾದ ದನಗಳ ಹರಾಜು.

ನಂ. 196. ತಾರೀಖು 22ನೇ ಅಕ್ಟೋಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸುವದೇನಂದರೆ, ಮೈಸೂರು ಗವರ್ನಮೆಂಟ್ ಅಮೃತ ಮಹಲ್ ಇಲಾಖೆಗೆ ಶೇರಿದ ಜಾಸ್ತೀಯಾದ ಮತ್ತು ತಿರಸ್ಕರಿಸಲ್ಪಟ್ಟ ದನಗಳ ಸಾಲಿಯಾನಾ ಹರಾಜು, ಇದರಡೀಕಂಡ ಸ್ಥಳಗಳಲ್ಲಿ ನಡಿಸಲ್ಪಡುವದು:—

ಹರಾಜು ನಡಿಯತಕ್ಕ ಸ್ಥಳ.	ಹರಾಜು ಹಾಕಲ್ಪಡುವ ಜಾಸ್ತೀ ದನಗಳ ಸುಮಾರು ಸಂಖೆ.	ಹರಾಜು ಹಾಕಲ್ಪಡುವ ತಿರಸ್ಕರಿಸಲ್ಪಟ್ಟ ದನಗಳ ಸಂಖೆ.	ತಿಂಗಳು.
1. ಗುಬ್ಬೀ ತಾಲ್ಲೂಕಿನಲ್ಲಿರುವ ಬಸ್ತಿಕಟ್ಟೆ ಕಾವಲ್	3 ವರುಷದ ಲಾಗಾಯತು 5 ವರುಷದ ವರಿಗಿನ 50 ಗೂಳಿಗಳು ಡಿಟೋ 30 ಹೋರಿಗಳು	75 ಹಸುಗಳು ವ ಕರುಗಳು	1884ನೇ ನವಂಬರ್ ತಿಂಗಳಲ್ಲಿ
2. ಕಿರಾ ತಾಲ್ಲೂಕು ಮುದಗೆರೆ ಕಾವಲ್	ಡಿಟೋ 50 ಗೂಳಿಗಳು ಡಿಟೋ 40 ಹೋರಿಗಳು	15 ಡಿಟೋ	ಡಿಟ್ಟೋ
3. ಚನ್ನರಾಯಪಟ್ಟಣ ತಾಲ್ಲೂಕು ಹಿರೇಸಾವೆ ಬಳಿಯಣ ದೊಡ್ಡೇರಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	25 ಡಿಟೋ	1884ನೇ ಡಿಸಂಬರ್ ತಿಂಗಳಲ್ಲಿ
4. ಹಾಸನ ತಾಲ್ಲೂಕು ಕೇಗೇಗುಡ್ಡ	ಡಿಟೋ 50 ಗೂಳಿಗಳು ಡಿಟೋ 20 ಹೋರಿಗಳು	15 ಡಿಟೋ	ಡಿಟೋ
5. ಯಡತೊರೆ ತಾಲ್ಲೂಕು ಚುಂಚಿನಕಟ್ಟೆ	ಡಿಟೋ 40 ಗೂಳಿಗಳು ಡಿಟೋ 40 ಹೋರಿಗಳು	ಡಿಟೋ	1885ನೇ ಜನವರೀ ತಿಂಗಳಲ್ಲಿ
6. ಹೊಳಲಕೆರೆ ತಾಲ್ಲೂಕು ರಾಮಗಿರಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 50 ಹೋರಿಗಳು	50 ಡಿಟೋ	ಡಿಟೋ
7. ಚಿತ್ರದುರ್ಗದ ತಾಲ್ಲೂಕು ಐಯ್ಯನಹಳ್ಳಿ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	50 ಡಿಟೋ	1885ನೇ ಫಿಬ್ರವರೀ ತಿಂಗಳಲ್ಲಿ
8. ಚಳ್ಳಕೆರೆತಾಲ್ಲೂಕು ವರವಿನ ಕಾವಲ್	ಡಿಟೋ 50 ಗೂಳಿಗಳು ಡಿಟೋ 30 ಹೋರಿಗಳು	25 ಡಿಟೋ	ಡಿಟೋ

ಹರಾಜಿನ ಪರತ್ತುಗಳು ವ ತಾರೀಖು ಸುದಾ ಐಯಿಂದ ಪ್ರಕಟಿಸಲ್ಪಡುವದು.

ಅಮಲ್ದಾರರುಗಳು ಅವರವರ ತಾಲ್ಲೂಕಿನಲ್ಲಿ ಈ ಹರಾಜಿನ ಸಂಗತಿಯನ್ನು ಪ್ರಸಿದ್ಧಪಡಿಸತಕ್ಕದ್ದೆಂದು ಕೇಳಿಕೊಳ್ಳಲ್ಪಟ್ಟಿರುತ್ತಾರೆ.

ಯೆ. ಸಿ. ಹೇ, ಕರ್ನಲ್,
ಇನ್‌ಚಾರ್ಜ್ ಅಮೃತಮಹಲ್ ಇಲಾಖೆ.